# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ 1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಚೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ : ಕವಿಪ್ರನಿನಿ/ಕ.ಘ/ಸ-20510/2015-16 ದಿನಾಂಕ : 6 JAN 2020
ಲಗತ್ತು : 03

ಮುಖ್ಯ ಇಂಜಿನಿಯರ್ (ವಿ),
ಪ್ರಸರಣ ವಲಯ, ಪ್ರಸರಣ ಭವನ,
ಎಫ್.ಟಿ.ಎಸ್ ಕಾಂಪೌಂಡ್, ಕವಿಪ್ರನಿನಿ,
ಎನ್.ಆರ್.ಮೊಹಲ್ಲಾ,
ಮೈಸೂರು-570007.

ಮಾನ್ಯರೆ,

ವಿಷಯ: ಕನ್ನಡ ಅನುಷ್ಠಾನ ಸಲಹಾ ಸಮಿತಿ ರಚಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ), ಸಾರ್ವಜನಿಕ ಉದ್ದಿಮೆಗಳ ಇಲಾಖೆ ರವರ ಪತ್ರ ಸಂಖ್ಯೆ: ಸಾಉಇ 107 ಎಂಇಎ 2019 ದಿನಾಂಕ: 02.12.2019.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಕ.ಘ/ಸ-20510/2015-16 ದಿನಾಂಕ: 19.05.2018 ಹಾಗೂ 02.02.2018.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕನ್ನಡವನ್ನು ರಾಜ್ಯದ ನಿಗಮ/ಮಂಡಳಿಗಳಲ್ಲಿ ನಡೆಸುವ ಪತ್ರ ವ್ಯವಹಾರಗಳು ಮತ್ತು ಆಡಳಿತದಲ್ಲಿ ಕಟ್ಟುನಿಟ್ಟಾಗಿ ಕನ್ನಡದಲ್ಲಿಯೇ ವ್ಯವಹರಿಸುವಂತೆ ತಿಳಿಸಿರುವ ಹಿನ್ನಲೆಯಲ್ಲಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಎಲ್ಲಾ ಕಚೇರಿಗಳಲ್ಲೂ ಕನ್ನಡ ಭಾಷೆಯನ್ನು ಸಂಪೂರ್ಣ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದುವರೆದು, ನಿಗಮದ ಬಹುತೇಕ ಕಚೇರಿಗಳಲ್ಲಿ ಕನ್ನಡ ಅನುಷ್ಠಾನದ ಪ್ರಗತಿಯು ಆಶಾದಾಯಕವಾಗಿದ್ದರೂ ಸಂಪೂರ್ಣ ಕನ್ನಡ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಉಲ್ಲೇಖ(1)ರ ನಿಗಮದ ಸುತ್ತೋಲೆಗಳಂತೆ, ಕಚೇರಿಗಳಲ್ಲಿ ಕನ್ನಡ ಅನುಷ್ಠಾನದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು, ಅಲ್ಲದೆ ನಿಗಮದ ಎಲ್ಲಾ ಕಚೇರಿಗಳಲ್ಲಿ ಶೇಕಡ ನೂರರಷ್ಟು ಕನ್ನಡ ಅನುಷ್ಠಾನಗೊಳಿಸಲು ಸಹಕಾರಿಯಾಗುವಂತೆ ನಿಗಮದ ವಲಯ ಮಟ್ಟದ ಕಚೇರಿಗಳಲ್ಲಿ ಕನ್ನಡ ಅನುಷ್ಠಾನದ ಪ್ರಗತಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ನಿಗಮಕ್ಕೆ ಪ್ರತಿ ತ್ರೈಮಾಸಿಕವಾಗಿ ವರದಿ ಸಲ್ಲಿಸಲು ಅನುಕೂಲವಾಗುವಂತೆ, ಕನಿಷ್ಠ ಆರು ಜನ ಅಧಿಕಾರಿ/ನೌಕರರನ್ನು ಒಳಗೊಂಡಂತೆ ನಿಮ್ಮ ಹಂತದಲ್ಲಿ ವಲಯ ಮಟ್ಟದ **"ಕನ್ನಡ ಸಲಹಾ ಸಮಿತಿ"** ರಚಿಸಿ ಒಂದು ವಾರದಲ್ಲಿ ನಿಗಮ ಕಚೇರಿಗೆ ತಿಳಿಸುವುದು, ಮತ್ತು ನಿಗಮಕ್ಕೆ ಕನ್ನಡ ಅನುಷ್ಠಾನದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುತ್ತಿರುವ ಬಗ್ಗೆ ಪ್ರತಿ ತ್ರೈಮಾಸಿಕ ವರದಿ ಸಲ್ಲಿಸಲು ಕೋರಿದೆ. ಹಾಗೂ ಉಲ್ಲೇಖ (2)ರಲ್ಲಿನ ಅನುಬಂಧದಲ್ಲಿ ತಿಳಿಸಿರುವ ಹದಿನೆಂಟು ಅಂಶಗಳ ಅನುಷ್ಠಾನದ ಕ್ರೋಢಿಕೃತ ವರದಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಮಾಹೆಯಾನ ನಿಗಮಕ್ಕೆ ರವಾನಿಸುವುದು.

ಆಡಳಿತದಲ್ಲಿ ಕನ್ನಡ ಬಳಕೆ ಮಾಡದೆ ಇರುವ ನೌಕರರ ವಿರುದ್ಧ ವಾರ್ಷಿಕ ವೇತನ ಬಡ್ತಿ ತಡೆಹಿಡಿಯುವುದು. ವಾಗ್ದಂಡನೆ, ಪದೋನ್ನತಿಯನ್ನು ತಡೆಹಿಡಿಯುವುದು ಅಥವಾ ಕಾಲವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವ ಮುಂತಾದ ಶಿಸ್ತು ಕ್ರಮಗಳನ್ನು ಜರುಗಿಸಲು ಸಂಬಂಧಪಟ್ಟ ಶಿಸ್ತು ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡಲು ಸೂಚಿಸಲಾಗಿದೆ.

ನಿಮ್ಮ ವಿಶ್ವಾಸಿ,

ನಿರ್ದೇಶಕರು (ಆಡಳಿತ ಮತ್ತು ಮಾನವ ಸಂ.)
ಕವಿಪ್ರನಿನಿ.

**<u>ಪ್ರತಿಯನ್ನು ಮಾಹಿತಿಗಾಗಿ,</u>**

1. ಅಧೀನ ಕಾರ್ಯದರ್ಶಿ (ಆಡಳಿತ), ಕರ್ನಾಟಕ ಸರ್ಕಾರ ಸಚಿವಾಲಯ, ಸಾರ್ವಜನಿಕ ಉದ್ದಿಮೆಗಳ ಇಲಾಖೆ, 7 ನೇ ಮಹಡಿ, 2 ನೇಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-560 001.
2. ಸರ್ಕಾರದ ಅಧೀನ ಕಾರ್ಯದರ್ಶಿ, ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆ(ಆಡಳಿತ ಕನ್ನಡ), ವಿಕಾಸಸೌಧ, ಬೆಂಗಳೂರು.
3. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಕರ್ನಾಟಕ ಸರ್ಕಾರ ಬೆಂಗಳೂರು.
4. ಜಂಟಿ ಕಾರ್ಯದರ್ಶಿ (ಆಡಳಿತ), ಸಾರ್ವಜನಿಕ ಉದ್ದಿಮಗಳ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ 2ನೇ ಹಂತ, 7ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಕ್ರೋಢಿಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.